MAY 24, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**‘A New Icon for a Fitter India - Pedaling to 2030” –** ಧ್ಯೇಯದೊಂದಿಗೆ, ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್, 75ನೇ ಆವೃತ್ತಿಯ ಅಭಿಯಾನ, ಧಾರವಾಡ ಸೇರಿದಂತೆ, ದೇಶದ 8 ಸಾವಿರಕ್ಕೂ ಅಧಿಕ ಸ್ಥಳಗಳಲ್ಲಿ, ಖೇಲೋ ಇಂಡಿಯಾ ಕೇಂದ್ರಗಳು ಹಾಗೂ ಭಾರತೀಯ ಕ್ರೀಡಾ ಪ್ರಾಧಿಕಾರ – ಸಾಯ್ ಕೇಂದ್ರಗಳಲ್ಲಿ, ಇಂದು ಬೆಳಗ್ಗೆ, ಜನ ಜಾಗೃತಿ ಸೈಕ್ಲೋಥಾನ್, ಜರುಗಿತು. ಅಹಮದಾಬಾದ್‌ನ 2030ರ ಕಾಮನವೆಲ್ತ್ ಕ್ರೀಡಾಕೂಟದ, ಶತಮಾನೋತ್ಸವ ಸ್ಮರಣಾರ್ಥ, ಗುಜರಾತಿನ ಸಬರಮತಿ ನದಿ ತೀರದಲ್ಲಿ, ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಖಾತೆ ಸಚಿವ, ಮನ್ಸುಖ್ ಮಾಂಡವೀಯ, ಫಿಟ್ ಇಂಡಿಯಾ; ಸಂಡೇಸ್ ಆನ್ ಬೈಸಿಕಲ್‌ಗೆ, ಇಂದು ಬೆಳಗ್ಗೆ ಚಾಲನೆ ನೀಡಿದರು. ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್, ಧಾರವಾಡ ಅಭಿಯಾನದಲ್ಲಿ ಪಾಲ್ಗೊಂಡಿದ್ದ, ರೇಲ್ವೆ ರಕ್ಷಣಾ ದಳದ, ಧಾರವಾಡ ಘಟಕದ, ಉಪ ನಿರೀಕ್ಷಕ ಎಂ. ರವಿಚಂದ್ರನ್, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಡಿದ್ದಾರೆ.

<><><>

**ಎಂ. ರವಿಚಂದ್ರನ್ ಧ್ವನಿ 48 ಸೆಕೆಂದುಗಳು**

<><><>

**ವಿವಿಧ ಬೇಡಿಕೆಗಳ** ಈಡೇರಿಕೆಗೆ ಒತ್ತಾಯಿಸಿ, ನಾಳೆ ಹಾಗೂ ನಾಡಿದ್ದು, ಭಾರತೀಯ ಸ್ಟೇಟ್ ಬ್ಯಾಂಕ್ ಸಿಬ್ಬಂದಿ, ಕರೆ ನೀಡಿದ್ದ ಮುಷ್ಕರವನ್ನು, ಮುಂದೂಡಲಾಗಿದ್ದು, ಎಂದಿನಂತೆ ಬ್ಯಾಂಕ್‌ಗಳು ಕಾರ್ಯನಿರ್ವಹಿಸಲಿವೆ ಎಂದು, ಅಖಿಲ ಭಾರತ ಎಸ್.ಬಿ.ಐ. ನೌಕರರ ಒಕ್ಕೂಟ, ತಿಳಿಸಿದೆ.

<><><>

**ಕೃತಕ ಬುದ್ಧಿಮತ್ತೆ – ಎ.ಐ. ತಂತ್ರಜ್ಞಾನ,** ಎಲ್ಲ ಕ್ಷೇತ್ರಗಳಲ್ಲಿಯೂ, ಪ್ರಾಮುಖ್ಯತೆ ವಹಿಸುತ್ತಿದೆ; ಶಿಕ್ಷಣ, ಬ್ಯಾಂಕಿಂಗ್, ರಕ್ಷಣೆ ಹಾಗೂ ಆರೋಗ್ಯ ಕ್ಷೇತ್ರಗಳ ಮೇಲೆ ಬೀರಲಿರುವ, ಸಂಭವನೀಯ ಪರಿಣಾಮಗಳ ಬಗ್ಗೆ, ಚರ್ಚಿಸಬೇಕಿದೆ ಎಂದು, ಹುಬ್ಬಳ್ಳಿಯ, ಕೆ.ಎಲ್.ಇ. ಟೆಕ್ ವಿಶ್ವವಿದ್ಯಾಲಯದ, ಸಮ ಕುಲಾಧಿಪತಿ ಡಾಕ್ಟರ್ ಅಶೋಕ ಶೆಟ್ಟರ ಅಭಿಪ್ರಾಯಪಟ್ಟಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕೆ.ಎಲ್.ಇ. ಟೆಕ್ ಸಭಾಂಗಣದಲ್ಲಿ, ಇ–ಟೆಕ್ ಲೀಡರ್‌ಶಿಪ್ ಶೃಂಗಸಭೆ ಉದ್ಘಾಟಿಸಿ, ಅವರು ಮಾತನಾಡಿದರು.

<><><>

**ಧಾರವಾಡ ಜಿಲ್ಲೆ, ಬಾಲ ಭವನದಲ್ಲಿ,** ಮಕ್ಕಳ ಬೇಸಿಗೆ ಶಿಬಿರ ನಡೆಯುತ್ತಿದ್ದು, 18 ದೇಶಗಳ ವಿಭಿನ್ನ, ನಾಣ್ಯ ಹಾಗೂ ನೋಟುಗಳ, ಅಪರೂಪದ ಸಂಗ್ರಹಗಳ ಪ್ರದರ್ಶನಕ್ಕೆ, ಮಹಿಳಾ ಮತ್ತು ಮಕ್ಕಳ, ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ, ವೀರನಗೌಡ ಪಾಟೀಲ, ಚಾಲನೆ ನೀಡಿದರು.

<><><>

**ಗದಗ ಜಿಲ್ಲೆಯಾದ್ಯಂತ,** ಪೂರ್ವ ಮುಂಗಾರು ಮಳೆ, ಉತ್ತಮವಾಗಿದೆ. ರೈತರು ಮಣ್ಣಿನ ಪರೀಕ್ಷೆ ಕೈಗೊಂಡು, ಫಲಿತಾಂಶ ಆಧರಿಸಿ, ಪೋಷಕಾಂಶಗಳನ್ನು ನೀಡಿ, ಬೆಳೆ ನಿರ್ಧರಿಸುವಂತೆ, ಕೃಷಿ ಇಲಾಖೆ, ಜಂಟಿ ನಿರ್ದೇಶಕಿ, ಚೇತನಾ ಪಾಟೀಲ ಕೋರಿದ್ದಾರೆ.

<><><>

**ರಾಜ್ಯ ಸರ್ಕಾರ ಆರಂಭಿಸಲು ಉದ್ದೇಶಿಸಿರುವ,** 800 ಕೆ.ಪಿ.ಎಸ್. – ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಿಂದ, ಸುತ್ತಮುತ್ತಲಿನ, 8 ಸಾವಿರಕ್ಕೂ ಅಧಿಕ, ಸರ್ಕಾರಿ ಪ್ರಾಥಮಿಕ, ಪ್ರೌಢ ಮತ್ತು ಅನುದಾನಿತ ಪ್ರೌಢ ಶಾಲೆಗಳು, ಮುಚ್ಚಲಿವೆ ಎಂದು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಕಳವಳ ವ್ಯಕ್ತ ಪಡಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ, ಕರ್ನಾಟಕ ಮಾಧ್ಯಮಿಕ ಶಿಕ್ಷಕರ ಸಂಘದ, ಹುಬ್ಬಳ್ಳಿ ಘಟಕ ಆಯೋಜಿಸಿದ್ದ ಸಭೆಯಲ್ಲಿ, ಅವರು ಮಾತನಾಡಿದರು.

<><><>

**ರಾಜ್ಯದ ಅನೇಕ ಕಡೆ,** ಮುಂಗಾರು ಪೂರ್ವ ಮಳೆಯಾಗುತ್ತಿದ್ದು, 17 ಜಿಲ್ಲೆಗಳಿಗೆ, ಇಂದು 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಗುಡುಗು, ಮಿಂಚು ಹಾಗೂ ಗಾಳಿ ಸಹಿತ, ಮಳೆ ಸುರಿಯಲಿದೆ ಎಂದು, ಹವಾಮಾನ ಇಲಾಖೆ, ತಿಳಿಸಿದೆ.

<><><>

**ವಿಜಯಪುರದಲ್ಲಿ** ನಿನ್ನೆ ಸಮಾರೋಪಗೊಂಡ, 7 ದಿನಗಳ, ರಾಜ್ಯ ಸಬ್ ಜೂನಿಯರ್ ರ್‍ಯಾಂಕಿಂಗ್, ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ, 15 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ, ಬೆಂಗಳೂರಿನ ಗೌತಮ್ ಎಸ್.ನಾಯರ್ ಹಾಗೂ, ಬಾಲಕಿಯರ ವಿಭಾಗದಲ್ಲಿ, ಬೆಂಗಳೂರಿನ ಮಹಿತಾ ನಾಯ್ಡು ಸುರಿಸೆಟ್ಟಿ, ಚಾಂಪಿಯನ್ ಪಟ್ಟ ಅಲಂಕರಿಸಿದರು.

**<><><>**

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ,** ಜನಪ್ರಿಯ 'ಮನ್ ಕಿ ಬಾತ್'ನ 134ನೇ ಆವೃತ್ತಿ, ಈ ತಿಂಗಳ 31 ರಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿ ಮೂಲಕ, ಪ್ರಸಾರವಾಗಲಿದೆ. ಈ ತಿಂಗಳ 29 ರೊಳಗೆ, My Gov.in ಜಾಲತಾಣ ಅಥವಾ 1800–11–7800 ಸಂಖ್ಯೆಗೆ ಕರೆ ಮಾಡಿ, ನಾಗರಿಕರು ತಮ್ಮ ಅಭಿಪ್ರಾಯಗಳನ್ನು, ಹಂಚಿಕೊಳ್ಳಬಹುದು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**